**ಸಾಕ್ಷಿಯನ್ನು ದಿನಾಂಕ: 23.03.2026 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ವಾದಿಗಳ ಪರ ಶ್ರೀ BBH ವಕೀಲರಿಂದಃ**

ನಾನು 10ನೇ ತರಗತಿಯವರೆಗೆ ಶಾಲೆಗೆ ಹೋಗಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಸಂಚಕಾರ ಪತ್ರವು ಸುಮಾರು 20 ವರ್ಷಗಳ ಹಿಂದೆ ಆಗಿರಬಹುದು. ಸಾಕ್ಷಿಯು ತನ್ನ ಸಾಕ್ಷ ಪ್ರಮಾಣ ಪತ್ರವನ್ನು ತೆಗೆದುಕೊಂಡು ಅದರಲ್ಲಿ 3ನೇ ಕಂಡಿಕೆಯಲ್ಲಿರುವ ಸಂಗತಿಗಳನ್ನು ಓದಿನೋಡಿ ಸದರಿ ಸಂಗತಿಗಳು ಎಲ್ಲವೂ ನಿಜ ಇರುತ್ತದೆ ಎಂದು ಹೇಳುತ್ತಾರೆ. ಸದರಿ ಸಂಗತಿಗಳ ಆಧಾರದ ಮೇಲೆ ಸಂಚಕಾರ ಪತ್ರವನ್ನು 1994-95 ರಲ್ಲಿ ಆಗಿರುತ್ತದೆ ಎಂದರೆ ನಿಜ. ಸಾಕ್ಷಿಗೆ ನಿಪಿ 1 ನ್ನು ತೋರಿಸಿ ನಿಪಿ 1ಕ್ಕೆ ತಾನು ಸಹಿ ಮಾಡುವ ಸಮಯದಲ್ಲಿ ನೊಂದಣಿ ಕಛೇರಿಯ ಮುದ್ರಾಂಕ ಶುಲ್ಕವನ್ನು ಪಡೆದುಕೊಂಡ ಸೀಲ್ ಇತ್ತೇ ಎಂದರೆ ಸಾಕ್ಷಿಯು ನಿಪಿ 1 ಕ್ಕೆ ನಾನು ಸಹಿ ಮಾಡುವ ಸಮಯದಲ್ಲಿಯೂ ಸಹ ಸದರಿ ಸೀಲ್ ಇತ್ತು ಎಂದು ಹೇಳುತ್ತಾರೆ. ನಿಪಿ 1 ಕ್ಕೆ ನಾನು ನಿಪಿ 1 ನ್ನು ತಯಾರಿಸಿದ ಸಮಯದಲ್ಲಿಯೇ ಸಹಿ ಮಾಡದೇ ಈಗ ಸಹಿ ಮಾಡಿ ವಾದಿಗೆ ಸಹಾಯವಾಗಲೀ ಎಂಬ ಕಾರಣದಿಂದ ಸುಳ್ಳು ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿ ಈಗ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಅದೆ.

**ದಿವಾಣಿ ನ್ಯಾಯಾಧೀಶರು, ಕಿತ್ತೂರ.**